ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 5, MAR-APR 2022, Pp. 91-97.**
**©*IIMRD*, Mysuru**

IIMRD JOURNALS

**www.iimrd.com**

# ಕರ್ನಾಟಕದ ಹಿಂದುಳಿದ ವರ್ಗಗಳ ಅಭಿವೃದ್ಧಿ: ಒಂದು ಅವಲೋಕನ

**ಜಯವರ್ಧನ್. ಸಿ[*] ಮತ್ತು ಪ್ರೊ. ಯಶೋಧ ಬಿ. ಎನ್[**]**

[*]ಸಂಶೋಧನಾ ವಿದ್ಯಾರ್ಥಿ, ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

[**]ಮಾರ್ಗದರ್ಶಕರು ಮತು ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

**ಸಾರಾಂಶ: (Abstract)**

*ಭಾರತ ದೇಶವು ಹಲವಾರು ಧರ್ಮ, ಸಮುದಾಯಗಳು ಮತ್ತು ಜಾತಿಗಳಿಂದ ಕೂಡಿರುವ ರಾಷ್ಟ್ರವಾಗಿದೆ. ಭಾರತದಲ್ಲಿರುವ ಅನೇಕ ಜಾತಿಗಳಲ್ಲಿ ಕೆಲವು ಜಾತಿಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರೆದಿದ್ದರೆ ಇನ್ನೂ ಅನೇಕ ಜಾತಿಗಳು ಹಿಂದುಳಿದಿವೆ. ಜಾತಿ ಮತ್ತು ಜಾತಿಗಳ ನಡುವಿನ ಶ್ರೇಷ್ಠತೆ, ಅಸಮಾನತೆಯ ಅವ್ಯವಸ್ಥೆಯಿಂದ ಹೊರ ಬರಲು ಸಾಧ್ಯವಾಗಿಲ್ಲ. ಪ್ರಸ್ತುತ ಲೇಖನದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಗತ್ಯತೆ ಮತ್ತು ಪ್ರಾಮುಖ್ಯತೆಯನ್ನು ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** *ಹಿಂದುಳಿದ ವರ್ಗಗಳ ಆಯೋಗ, ಸಾಮಾಜಿಕ ಅಸಮಾನತೆ, ಡಾ. ಬಿ. ಆರ್. ಅಂಬೇಡ್ಕರ್, ದಲಿತ, ಹಿಂದುಳಿದ ಸಮುದಾಯಗಳು.*

## ಪೀಠಿಕೆ

ಭಾರತದಲ್ಲಿ ಬಹುಸಂಖ್ಯಾತ ಸಮುದಾಯಗಳು ಹಿಂದುಳಿದವರು ಶೋಷಿತರು ಮತ್ತು ದಲಿತರು. ಇಂತಹ ವ್ಯವಸ್ಥೆಯ ವಿರುದ್ಧ ಹಲವಾರು ಸಮಾಜ ಸುಧಾರಕರು ಅದರಲ್ಲೂ ಛತ್ರಪತಿ ಶಾಹು ಮಹರಾಜ್, ಇ.ವಿ. ರಾಮಸ್ವಾಮಿ ಪೆರಿಯಾರ ನಾಯ್ಕಾರ್ ಮುಂತಾದ ಮಹನೀಯರು ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆ ಹಾಗೂ ರಾಜಕೀಯ ಪ್ರಾತಿನಿಧ್ಯತೆಗಾಗಿ ಹೋರಾಟವನ್ನು ಮಾಡಿದವರು. ಸಾಮಾಜಿಕ ಅಸಮಾನತೆಯು ಎಲ್ಲಾ ಸಮಾಜಗಳಲ್ಲೂ ಕಂಡುಬಂದರೂ ಹಿಂದೂ ಸಮಾಜದಲ್ಲಿ ಆಳವಾಗಿ ಬೇರೂರಿದೆ. ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳವಳಿಯೂ ಬ್ರಾಹ್ಮಣೇತರ ಚಳವಳಿಯ ಒಂದು ಭಾಗ. 1857 ರಿಂದ 1881ರ ನಡುವಿನ ಮೈಸೂರಿನ ಕಮೀಷನರ್ ಆಳ್ವಿಕೆಯ ಕಾಲದಲ್ಲಿ ಬ್ರಾಹ್ಮಣರ ಅಧಿಕಾರದ ಏಕಸ್ವಾಮ್ಯ ಮತ್ತು ಬ್ರಾಹ್ಮಣರ ಪ್ರಾಬಲ್ಯ ಮುಂದುವರೆದಿದ್ದನ್ನು ಇತಿಹಾಸದಿಂದ ತಿಳಿಯಬಹುದು, ಈ ಪರಿಸ್ಥಿತಿ ಬ್ರಿಟೀಷರ ಕಾಲದಲ್ಲಿಯೂ ಇತ್ತು. 1882ರಲ್ಲಿ ಪ್ರಜಾಸತ್ತಾತ್ಮಕ ಅಸೆಂಬ್ಲಿಯು ಜನರಿಗೆ ತಮ್ಮ ಸಂಕಟ ಮತ್ತು ದೂರುಗಳನ್ನು ವ್ಯಕ್ತಪಡಿಸುವಂತೆ ವೇದಿಕೆಯನ್ನು ಒದಗಿಸಿತು ಮತ್ತು ಪ್ರಣಾಳಿಕೆಯನ್ನು ಪಾಸು ಮಾಡಿತು. 1875ರಿಂದ ಮೈಸೂರು ರಾಜ್ಯದಲ್ಲಿ ಸಾರ್ವಜನಿಕ ಸೇವೆ ನೇಮಕಾತಿಗೆ ಸಂಬಂಧಿಸಿದಂತೆ ವಿವಾದ

*Please cite this article as:* *ಜಯವರ್ಧನ್. ಸಿ. ಮತ್ತು ಪ್ರೊ. ಯಶೋಧ ಬಿ. ಎನ್.* (2022). ಕರ್ನಾಟಕದ ಹಿಂದುಳಿದ ವರ್ಗಗಳ ಅಭಿವೃದ್ಧಿ: ಒಂದು ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(5). ಪು.ಸಂ. 91–97.*

ಉಂಟಾಯಿತು. ಹಾಗೂಭಾರತದಲ್ಲಿ 19ನೆಯ ಶತಮಾನದ ಉತ್ತರಾರ್ಧ ಮತ್ತು 20ನೇಯ ಶತಮಾನದ ಈ ಚಳವಳಿಯು ಪ್ರಾರಂಭವಾಯಿತೆನ್ನಬಹುದು.

**ಅಧ್ಯಯನದ ಉದ್ದೇಶಗಳು**

- ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಹಿನ್ನಲೆಯನ್ನು ತಿಳಿಯುವುದು.
- ಕರ್ನಾಟಕದಲ್ಲಿ ಹಿಂದುಳಿದ ವರ್ಗಳನ್ನು ಕುರಿತು ನಡೆದಿರುವ ಅಧ್ಯಯನಗಳನ್ನು ಪರಾಮರ್ಶಿಸುವುದು.

**ಸಂಶೋಧನಾ ವಿಧಾನ**

ಸಂಶೋಧನಾ ವಿಧಾನವು ಸಾಮಾನ್ಯವಾಗಿ ಸಮಸ್ಯೆಯನ್ನು ಪರಿಹರಿಸಲು ಒಂದು ಮಾರ್ಗಸೂಚಿ ವ್ಯವಸ್ಥೆಯಾಗಿದ್ದು, ಹಂತಗಳು, ಕಾರ್ಯಗಳು, ವಿಧಾನಗಳು, ತಂತ್ರಗಳು ಮತ್ತು ಸಾಧನಗಳಂತಹ ನಿರ್ದಿಷ್ಟ ಅಂಶಗಳನ್ನು ಹೊಂದಿರುತ್ತದೆ. ನಾವು ಸಂಶೋಧನಾ ವಿಧಾನದ ಬಗ್ಗೆ ಮಾತನಾಡುವುದಲ್ಲದೆ ನಮ್ಮ ಸಂಶೋಧನಾ ಅಧ್ಯಯನದ ಸಂಧರ್ಭದಲ್ಲಿ ಬಳಸುವ ವಿಧಾನಗಳ ಹಿಂದಿನ ತರ್ಕವನ್ನು ಪರಿಗಣಸುತ್ತದೆ. ಒಂದು ನಿರ್ದಿಷ್ಟ ವಿಧಾನ ಅಥವಾ ತಂತ್ರವನ್ನು ಏಕೆ ಬಳಸುತ್ತಿದ್ದೇವೆ ಮತ್ತು ನಾವು ಇತರರನ್ನು ಏಕೆ ಬಳಸುತ್ತಿಲ್ಲ ಎಂದು ವಿವರಿಸುತ್ತೇವೆ. ಆದ್ದರಿಂದ ಸಂಶೋಧನಾ ಫಲಿತಾಂಶಗಳು ಸಂಶೋಧಕರಿಂದ ಅಥವಾ ಇತರರಿಂದ ಮೌಲ್ಯಮಾಪನ ಮಾಡಲು ಸಮರ್ಥವಾಗಿವೆ. ಇಡೀ ಸಂಶೋಧನಾ ಯೋಜನೆಯನ್ನು ಸಂಘಟಿಸಿದ ಪ್ರಾಯೋಗಿಕ ಮಾರ್ಗವನ್ನು ಇದು ಸೂಚಿಸುತ್ತದೆ. ಈ ಅಧ್ಯಾಯವು ಅಧ್ಯಯನದ ಗುರಿಗಳನ್ನು ಸಾಧಿಸಲು ಕೈಗೊಂಡ ವಿಧಾನಗಳ ಬಗ್ಗೆ ತಿಳಿಸುತ್ತದೆ. ಹಾಗೂ ಸಮ್ಯೆಯ ಹೇಳಿಕೆ, ಸಂಶೋಧನಾ ವಿನ್ಯಾಸ. ಮಾದರಿ ವಿಧಾನ, ಸಂಶೋಧನಾ ವಿನ್ಯಾಸ, ಮಾಹಿತಿ ಸಂಗ್ರಹಣೆಯ ವಿಧಾನ, ಮಾಹಿತಿ ವಿಶ್ಲೇಷಣೆ, ಸಂಖ್ಯಾಶಾಸ್ತ್ರೀಯ ಹಂತಗಳು, ಅಧ್ಯಾಯೀಕರಣ ಮುಂತಾದಂತಹ ಅಂಶಗಳನ್ನು ಒಳಗೊಂಡಿರುತ್ತದೆ.

**ಅಧ್ಯಯನದ ಮಹತ್ವ**

20ನೇಯ ಶತಮಾನದ ವೈಚಾರಿಕ ಚಳವಳಿಗಳಲ್ಲಿ ಹಿಂದುಳಿದ ವರ್ಗಗಳ ಚಳವಳಿಯು ಅತ್ಯಂತ ಪ್ರಮುಖವಾದುದು. ಹಿಂದುಳಿದ ವರ್ಗಗಳ ಚಳವಳಿಯು ಶೋಷಿತ, ದೌರ್ಜನ್ಯ, ಅನ್ಯಾಯ ಅಸಮಾನತೆಗೆ ಒಳಗಾದ ಜನರ ಕಣ್ತೆರೆಸುವಲ್ಲಿ ಅದರ ಪಾತ್ರ ಬಹುಮುಖ್ಯವಾದುದು. ಪ್ರಜಾಸತ್ತಾತ್ಮಕ ಸಮಾಜದಲ್ಲಿ ಇತರ ವರ್ಗಗಳಂತೆ ಎಲ್ಲರಿಗೂ, ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಾನಮಾನವನ್ನು ಕಲ್ಪಿಸುವಂತೆ ಅವಕಾಶ ಮಾಡಿಕೊಟ್ಟಿರುವುದು ಇಡೀ ಸಮಾಜವೇ ಎಚ್ಚೆತ್ತುಕೊಳ್ಳುವಂತೆ ಮಾಡಿ, ಅದರ ಮಹತ್ವವನ್ನು ಸಾರುತ್ತದೆ ಹಾಗೂ ಹಿಂದುಳಿದ ವರ್ಗಗಳ ಆಯೋಗವು ಅದರ ನೈತಿಕತೆಯನ್ನು ಕಾಯ್ದುಗೊಂಡಿರುವುದು ಅದರ ಮಹತ್ವವನ್ನು ಹೆಚ್ಚಿಸುತ್ತದೆ. ಇಂದಿನ ದಿನಗಳಲ್ಲಿ ಹಿಂದುಳಿದ ವರ್ಗಗಳ ಜನರು ರಾಜಕೀಯ ನಾಯಕತ್ವದಲ್ಲಿ ಹೆಚ್ಚಿನ ಒಲವು ತೋರುತ್ತಿರುವುದು ಇದರ ಪ್ರಾಮುಖ್ಯತೆಯನ್ನು ತೋರಿಸುತ್ತದೆ.

**ಸಾಹಿತ್ಯ ಪರಾಮರ್ಶೆ**

ಕುಪ್ಪುಸ್ವಾಮಿ. ಬಿ. (1985). ಅವರು ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳುವಳಿಯನ್ನು ಕುರಿತಂತೆ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಹಿಂದುಳಿದ ವರ್ಗಗಳ ಚಳವಳಿ, ಹಿನ್ನೆಲೆ, ಬೆಳವಣಿಗೆ,

ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳವಳಿಯ ಮಹತ್ವ, ಉದ್ದೇಶ ಮತ್ತು ಮೈಸೂರು ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಚರ್ಚಿಸಿದ್ದಾರೆ. ಬ್ರಾಹ್ಮಣೇತರ ಚಳವಳಿಯು ಕರ್ನಾಟಕದಲ್ಲಿ ಆರಂಭವಾದ ಹಿಂದುಳಿದ ವರ್ಗಗಳ ಚಳವಳಿಯಾಗಿದೆ. ಇತರ ವರ್ಗಗಳು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಸಂಘಟಿತರಾಗಲು ಚಳವಳಿಗೆ ಧುಮುಕಿದರು. ರಾಜಕೀಯ ಅಸಮಾನತೆ, ಸರ್ಕಾರಿ ಹುದ್ದೆಗಳ ಹಂಚಿಕೆಯಲ್ಲಿನ ಅಸಮಾನತೆಗೆ ಜಾತಿ ವ್ಯವಸ್ಥೆಯೇ ಕಾರಣ ಎಂಬುದನ್ನು ತಿಳಿಸಿದ್ದಾರೆ. ಈ ಸಂಶೋಧನಾ ಪ್ರಬಂಧವನ್ನು ಸಹ ನನ್ನ ಸಂಶೋಧನೆಯ ಒಂದು ಭಾಗವಾಗಿ ಅಧ್ಯಯನ ಮಾಡಲಾಗಿದೆ.

ರಾವ್. ಎಂ.ಎಸ್.ಎ. (1979) ರವರು ಹಿಂದುಳಿದ ವರ್ಗಗಳ ಚಳವಳಿಯ ಅಧ್ಯಯನವನ್ನು ಕೇರಳ ರಾಜ್ಯದ ಎಸ್.ಎನ್.ಡಿ.ಪಿ. ಚಳವಳಿ ಮತ್ತು ಬಿಹಾರದ ಯಾದವರ ಚಳವಳಿ ಸಾಮಾನ್ಯವಾಗಿ ದಕ್ಷಿಣ ಭಾರತದ ಚಳವಳಿಗಳಿಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಿದ್ದಾರೆ. ಇವರು ಎರಡು ಚಳುವಳಿಗಳ ತಿರುವುಗಳ ಬಗ್ಗೆ ಹಾಗೂ ಬೇರೆ ಬೇರೆ ರೀತಿಯ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಲಾಗಿದ್ದು, ಪ್ರತಿಯೊಂದು ಚಳವಳಿಯನ್ನು ಸಾಕಾರಗೊಳಿಸಲು ಸಂಘಟನೆ, ಸಿದ್ಧಾಂತ, ಸಾಮೂಹಿಕ ಹೊಂದಾಣಿಕೆ ಹಾಗೂ ಕಾರ್ಯಾಚರಣೆ ಮತ್ತು ಉತ್ತಮ ನಾಯಕತ್ವ ಬಹಳ ಮಹತ್ವವಾದ ಅಂಶಗಳಾಗಿವೆ ಎಂದು ತಿಳಿಸಿದ್ದಾರೆ. ಅದಲ್ಲದೆ ಇವರು ಸಾಮಾಜಿಕ ಬದಲಾವಣೆಯ ಸ್ವರೂಪವನ್ನು ಕೇರಳದ ಇಜ್ವಾಸ್ ಮತ್ತು ಬಿಹಾರದ ಯಾದವರ ಚಳವಳಿಯಲ್ಲಿ ಸಾಮಾಜಿಕ ಸಂಘಟನೆ ಕುಂಠಿತವಾಗಿತ್ತು. ಈ ಎರಡು ಸಮುದಾಯಗಳು ಶಿಕ್ಷಣ, ಉದ್ಯೋಗ, ಆರ್ಥಿಕ, ರಾಜಕೀಯ ಮತ್ತು ಸಂಸ್ಕೃತಿಯಲ್ಲಿ ಸ್ವತಂತ್ರ ಭಾರತದ ನಂತರ ಹೆಚ್ಚು ಬದಲಾವಣೆಗಳಾಯಿತು ಎಂದು ತಮ್ಮ ಸಾಹಿತ್ಯದಲ್ಲಿ ಅವಲೋಕಿಸಿದ್ದಾರೆ. ಅದರಂತೆ ಯಾವುದೇ ಚಳವಳಿಯು ಯಶಸ್ವಿಯಾಗಲು ಉತ್ತಮ ನಾಯಕತ್ವ, ಸಂಘಟನೆ, ಸಿದ್ಧಾಂತ ಹಾಗೂ ಸಾಮೂಹಿಕ ಕಾರ್ಯಚರಣೆ ಎಲ್ಲವೂ ಪ್ರಮುಖ ಅಂಶಗಳಾಗಿವೆ ಎಂದು ಬಲವಾಗಿ ಪ್ರತಿಪಾದಿಸಿದ್ದಾರೆ. ಆದ್ದರಿಂದಾಗಿ, ಈ ಸಾಹಿತ್ಯವನ್ನು ಪ್ರಸ್ತುತ ಅಧ್ಯಯನಕ್ಕೆ ಗುರಿಪಡಿಸಲಾಗಿದೆ.

ರೂಡಾಲ್ಫ್ ಮತ್ತು ರೂಡಾಲ್ಫ್ (1967) ರವರು ತಮ್ಮ ಅಧ್ಯಯನದಲ್ಲಿ ಭಾರತದಲ್ಲಿನ ರಾಜಕೀಯ ಅಭಿವೃದ್ಧಿಯ ಆರಂಭದ ಬಗ್ಗೆ ಅಧ್ಯಯನ ಮಾಡಿದ್ದಾರೆ. ಲೇಖಕರು ತಮ್ಮ ಅಧ್ಯಯನದಲ್ಲಿ ಆಧುನೀಕರಣದಲ್ಲಿ ಜಾತಿ ಸಂಘಟನೆಗಳ ಪಾತ್ರವನ್ನು ಕುರಿತು ಚರ್ಚಿಸಿದ್ದು, ಜಾತಿ ಸಜ್ಜುಗೊಳ್ಳುವಿಕೆಗೆ ಒಂದು ಪ್ರಮುಖ ಅಂಶವೆಂದರೆ ಸಂಸ್ಕೃತಿಯ ಬದಲಾವಣೆ ಮತ್ತು ಅದರ ಸ್ವರೂಪ ಸಾರ್ವಜನಿಕ ಕಲ್ಯಾಣಗಳಿಗೆ ಜಾತಿ ಅವಶ್ಯವಾದ ಅಂಶವಾಗಿದ್ದು, ಅಂದರೆ ಪ್ರಜಾಪ್ರಭುತ್ವದ ಷರತ್ತುಗಳು ಮಾತ್ರವೇ ಆಗಿದೆ. ಇವರು ಮಾನವನ ಜ್ಞಾನದ ಅರಿವಿನ ಅಂಶವು ಬಹಳ ಪ್ರಮುಖವಾಗಿದ್ದು, ಸಾರ್ವತ್ರಿಕರಣ ಮತ್ತು ಸಾರ್ವತ್ರಿಕವಾದದ ಸಂಪ್ರದಾಯಬದ್ಧ ಸಮಾಜದಲ್ಲಿ ಜಾತಿ ವ್ಯವಸ್ಥೆ ಮತ್ತು ಅದರ ಸ್ವರೂಪದ ಬಗ್ಗೆ ಮತ್ತು ಜಾತಿ ಸಂಘಟನೆಗಳು ಆಧುನಿಕ ಕಾಲದಲ್ಲಿ ಆಧುನೀಕರಣದೊಂದಿಗೆ ಸಂಘಟನೆ ಮತ್ತು ಜಾತಿ ಒಕ್ಕೂಟಗಳು ಮಾನವನ ಎಲ್ಲಾ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಈ ಒಕ್ಕೂಟಗಳು ಬೇಕೆಂದು ತಮ್ಮ ಸಾಹಿತ್ಯದಲ್ಲಿ ತಿಳಿಸಿದ್ದಾರೆ. ಹಾಗಾಗಿ ಭಾರತದ ಜಾತಿ ವ್ಯವಸ್ಥೆಯ ಮೇಲೆ ಆಧುನೀಕರಣದ ಪ್ರಭಾವವನ್ನು ತಿಳಿಯಲು ಈ ಸಾಹಿತ್ಯವು ನೆರವಾಗಿದೆ.

ಶ್ರೀನಿವಾಸ ಎಂ.ಎನ್ (1964) ಹೆಸರಾಂತ ಲೇಖಕರು, ಇವರು ಆಧುನಿಕ ಭಾರತದಲ್ಲಿ ಜಾತಿ ಎಂಬ ಸಾಹಿತ್ಯದಲ್ಲಿ ಚಾರಿತ್ರಿಕ ಅಧ್ಯಯನ ನಡೆಸಿ ಜಾತಿಯ ಅರ್ಥ, ಜಾತಿಯ ಉಗಮ, ಜಾತಿಯ ಹಿನ್ನೆಲೆ ಹಾಗೂ ಸಮಾಜದಲ್ಲಿ ಜಾತಿ ವ್ಯವಸ್ಥೆ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ಆಧುನಿಕ ಭಾರತದಲ್ಲಿ ಈವತ್ತಿಗಾಗಲೇ ಆಧುನೀಕರಣದ ಪರಿಕಲ್ಪನೆಯಲ್ಲಿ ಜಾತಿಯು ಒಂದು ಗುರ್ತಿಸಿಕೊಳ್ಳುವ ರಾಜಕಾರಣವಾಗಿ ಈ ಜಾತಿ ವರ್ಗ ವ್ಯವಸ್ಥೆಯನ್ನೆ ಆಧರಿಸಿದೆ. ಜಾತಿ/ವರ್ಗದ ಮಜಲುಗಳು ಹಾಗೂ ಅದರ ವಿಸ್ತೃತವಾದ ರೂಪ ಜಾತಿಯ ಸ್ವರೂಪ ಹೇಗೆ ಪ್ರಾದೇಶಿಕವಾಗಿ ಭಿನ್ನವಾಗಿದೆ ಎಂಬುದನ್ನು ಲೇಖಕರು ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ಭಾರತದಲ್ಲಿ ಬದಲಾಗುತ್ತಿರುವ ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಜಾತಿಯ ಸ್ವರೂಪವನ್ನು ಕುರಿತು ಬಹಳ ವೈಜ್ಞಾನಿಕವಾಗಿ ಅರ್ಥವನ್ನು ನೀಡುವ ಪ್ರಯತ್ನವನ್ನು ನಡೆಸಿದ್ದಾರೆ. ಆದ್ದರಿಂದ ಪ್ರಸ್ತುತ ಅಧ್ಯಯನವನ್ನು ನನ್ನ ಅಧ್ಯಯನದಲ್ಲಿ ಪರಾಮರ್ಶಿಸಿದ್ದು ಜಾತಿ ಮತ್ತು ಗುರುತಿಸಿಕೊಳ್ಳುವ ರಾಜಕಾರಣವನ್ನು ಕುರಿತು ಅಧ್ಯಯನ ಮಾಡಲು ಉಪಯುಕ್ತವಾಗಿದೆ

**ಹಿಂದುಳಿದ ವರ್ಗಗಳ ಆಯೋಗದ ಅರ್ಥ**

ಸರ್ಕಾರವು ಒಂದು ನಿರ್ದಿಷ್ಟ ಅವಧಿಗೆ ಹಿಂದುಳಿದ ವರ್ಗಗಳನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಹಲವಾರು ಜಾತಿ ಸಮುದಾಯಗಳನ್ನೊಳಗೊಂಡ ಸಮೂಹವನ್ನು ಕುರಿತು ಅಧ್ಯಯನ ಮಾಡಲು ಅವರಿಗೆ ಸೂಕ್ತ ಸರ್ಕಾರಿ ಸವಲತ್ತುಗಳನ್ನು ನೀಡಲು ಹಾಗೂ ಕಲ್ಯಾಣ ಕಾರ್ಯಕ್ರಮ ರೂಪಿಸಲು ವಕೀಲರು ಅಥವಾ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಆಯೋಗವೊಂದನ್ನು ರಚಿಸಲಾಗಿದೆ. ಇದನ್ನು ಹಿಂದುಳಿದ ವರ್ಗಗಳ ಆಯೋಗ ಎಂದು ಕರೆಯಲಾಗುತ್ತದೆ. ಈ ಆಯೋಗವು ಸ್ವತಂತ್ರವಾದ ಸ್ಥಾನಮಾನವನ್ನು ಹೊಂದಿರುತ್ತದೆ. ಈ ಆಯೋಗದಲ್ಲಿ ಹಿಂದುಳಿದ ಜಾತಿಯ ಪ್ರತಿನಿಧಿಗಳು ಸದಸ್ಯರಾಗಿ ಕೆಲಸ ಮಾಡುತ್ತಾರೆ. ಪ್ರಸ್ತುತ ಇಂತಹ ಆಯೋಗಗಳು ಸಾಮಾನ್ಯವಾಗಿ ಹಿಂದುಳಿದ ವರ್ಗಗಳ ಸಮಸ್ಯೆಗಳನ್ನು ಗುರುತಿಸಿ ಅವುಗಳ ಪರಿಹಾರಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವುದು ಆಯೋಗದ ಕರ್ತವ್ಯವಾಗಿವೆ. ಆರಂಭಿಕ ಹಿಂದುಳಿದ ವರ್ಗಗಳ ಆಯೋಗಗಳು ಹಿಂದುಳಿದ ವರ್ಗವನ್ನು ವ್ಯಾಖ್ಯಾನ ಮಾಡುತ್ತಾ, ಆ ವರ್ಗಗಳನ್ನು ಗುರುತಿಸುವ ಗುರುತರ ಕಾರ್ಯವನ್ನು ಸಹ ಮಾಡಬೇಕಿತ್ತು. ಕೇಂದ್ರ ಸರ್ಕಾರ ನೇಮಿಸಿದ ಆಯೋಗಗಳು ರಾಷ್ಟ್ರೀಯ ನೆಲೆಯಲ್ಲಿ ಇಂತಹ ಸಮುದಾಯಗಳನ್ನು ಗುರುತಿಸಿದೆ. ಹಾಗೂ ಪ್ರತಿ ರಾಜ್ಯಗಳಿಗೂ ಹಿಂದುಳಿದ ವರ್ಗಗಳನ್ನು ಪಾದ್ರೇಶಿಕ ಸಾಮಾಜಿಕ ನೆಲೆಯಲ್ಲಿ ಗುರುತಿಸಿ ಮೀಸಲಾತಿ ಮತ್ತಿತರ ಅನುಕೂಲತೆಗಳನ್ನು ನೀಡಲು ಸೂಚಿಸಿದೆ.

**ಕೋಷ್ಟಕ 1: ಮೈಸೂರು ರಾಜ್ಯದ ಪ್ರಪ್ರಥಮ ಹಿಂದುಳಿದ ವರ್ಗಗಳಸಮಿತಿ–1918**

| ಹೆಸರು | ಹುದ್ದೆ | ಜಾತಿ/ಧರ್ಮ |
|---|---|---|
| ಸರ್. ಲೆಸ್ಲಿ. ಸಿ. ಮಿಲ್ಲರ್ | ಅಧ್ಯಕ್ಷರು | ಕ್ರೈಸ್ತ (ಯುರೋಪಿಯನ್) |
| ಸಿ. ಶ್ರೀಕಂಠೇಶ್ವರ ಅಯ್ಯರ್ | ಸದಸ್ಯರು | ಬ್ರಾಹ್ಮಣ |
| ಎಂ.ಸಿ. ರಂಗ ಅಯ್ಯರ್ | ಸದಸ್ಯರು | ಬ್ರಾಹ್ಮಣ |

| | | |
|---|---|---|
| ಎಂ. ಮುತ್ತಣ್ಣ | ಸದಸ್ಯರು | ಬ್ರಾಹ್ಮಣ |
| ಹೆಚ್. ಚೆನ್ನಯ್ಯ | ಸದಸ್ಯರು | ಒಕ್ಕಲಿಗ |
| ನವಾಬ್ ಗುಲಾಮ್ ಅಹಮ್ಮದ್ ಕಲಾಮಿ | ಸದಸ್ಯರು | ಮುಸ್ಲಿಂ |
| ಎಂ. ಬಸವಯ್ಯ | ಸದಸ್ಯರು | ಲಿಂಗಾಯಿತ |

***ಆಧಾರ:*** *ಮಿಲ್ಲರ್ ಸಮಿತಿ ನೇಮಿಸಿ ಸರ್ಕಾರ ಹೊರಡಿಸಿದ ಆದೇಶ ಇ.ಎ.ಜಿ.308, ದಿನಾಂಕ: 23ನೇ ಆಗಸ್ಟ್ 1918.*

**ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಸ್ಥೂಲ ಪರಿಚಯ**

ಕರ್ನಾಟಕದ ಹಿಂದುಳಿದ ವರ್ಗಗಳ ಅಂದೋಲನ ಮತ್ತು ಏಳಿಗೆಯ ನೇತಾರ ದಿವಂಗತ ಡಿ. ದೇವರಾಜ ಅರಸು ಅವರ ನೇತೃತ್ವದಲ್ಲಿ ಕರ್ನಾಟಕದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮತ್ತು ಹಿಂದುಳಿದ ವರ್ಗ ಜಾಗೃತಿಯ ಕ್ರಾಂತಿಯನ್ನೇ ಉಂಟು ಮಾಡಿದರು. ಶ್ರೀ ಡಿ. ದೇವರಾಜ ಅರಸು ಅವರಿಗೆ ತಳಹಂತದ ಜನಸಮುದಾಯಗಳ ಬಗ್ಗೆ ನೈಜ ಹಾಗೂ ಹೃದಯ ಪೂರ್ವಕ ಕಳಕಳಿಯಿದ್ದಿತು. ಇವರ ಮುಖ್ಯಮಂತ್ರಿತ್ವ ಅವಧಿಯಲ್ಲಿ ಕರ್ನಾಟಕ ರಾಜ್ಯಾಡಳಿತದ ವೈಖರಿಯು ರಾಜ್ಯದ ಜನತೆಗೆ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಎಲ್ಲಿಯೂ ಇಲ್ಲದ ಹೆಚ್ಚಿನ ಪ್ರಾತಿನಿಧ್ಯವನ್ನು ದೊರಕಿಸಿಕೊಟ್ಟಿತು. ಸಮಾಜದಲ್ಲಿ ಅಲಕ್ಷಿಸಲ್ಪಟ್ಟಿದ್ದ ಹಾಗೂ ತುಳಿತಕ್ಕೊಳಗಾಗಿದ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಣ್ತೆರಿಸಿ ಸಮಾಜದ ಏಳಿಗೆಯಲ್ಲಿ ಅವರ ಪಾತ್ರ ಮತ್ತು ಅವರ ಹಕ್ಕು ಬಾಧ್ಯತೆಗಳ, ಸೌಲಭ್ಯಗಳ ಅರಿವನ್ನುಂಟು ಮಾಡಿ ಕರ್ನಾಟಕದಲ್ಲಿ ವರ್ಗ ಸಂಘರ್ಷವನ್ನೇರ್ಪಡಿಸಿದರು. ದೇವರಾಜ ಅರಸು ಅವರು ರಾಜಕೀಯ ಕ್ಷೇತ್ರದಲ್ಲಿ ಎಂದೂ ಇಲ್ಲದ ಪ್ರಾತಿನಿಧ್ಯವನ್ನು, ಆರ್ಥಿಕ ಕ್ಷೇತ್ರದಲ್ಲಿ ವಿಶೇಷ ಸವಲತ್ತುಗಳನ್ನು, ಉದ್ಯೋಗ ನೇಮಕಾತಿ, ಬಡ್ತಿಯಲ್ಲಿ ಮೀಸಲಾತಿಯನ್ನು ಜಾರಿಗೆ ತಂದರು. ಭೂ ಸುಧಾರಣೆ, ಜೀತ ವಿಮುಕ್ತಿ, ಋಣಭಾದೆ ಪರಿಹಾರ, ಮಲಹೊರುವ ಪದ್ಧತಿ ನಿಷೇಧ ಮುಂತಾದ ಕ್ರಾಂತಿಕಾರಕ ಸುಧಾರಣಾ ಕಾನೂನುಗಳನ್ನು ಜಾರಿಗೊಳಿಸಿ ಹಿಂದುಳಿದ ವರ್ಗಗಳ ಹಿತವನ್ನು ರಕ್ಷಿಸುವುದೇ ಅಲ್ಲದೆ ಮುಂದಿನ ಪೀಳಿಗೆಯು ಅಭ್ಯುದಯದತ್ತ ಸಾಗಲು ಮಾರ್ಗ ಸೂಚಿಯಾದರು. ಬಹುಶ: ಭಾರತದ ಯಾವುದೇ ರಾಜ್ಯದಲ್ಲೇ ಆಗಲಿ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮೂವರು ಮುಖ್ಯಮಂತ್ರಿಗಳು ಮತ್ತು ಹತ್ತಾರು ಮಂತ್ರಿಗಳು ಮಂಡಳಿ ಅಧ್ಯಕ್ಷರುಗಳಾಗಿರುವುದು ಕಂಡುಬಂದಿಲ್ಲ. ಶ್ರೀ ಡಿ. ದೇವರಾಜ ಅರಸು ಕ್ರಾಂತಿಯು ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಬಾಗಿದ್ದ ಬೆನ್ನನ್ನು ಮೇಲೇರಿಸಿ ಅಭ್ಯುದಯಕ್ಕೆ ಸಾಗುವಂತೆ ಮಾಡಿತು. ಶ್ರೀ. ಡಿ. ದೇವರಾಜ ಅರಸು ಅವರು ತಮ್ಮ ಮುಖ್ಯಮಂತ್ರಿತ್ವ ಅವಧಿಯಲ್ಲಿ ಹಿಂದುಳಿದ ವರ್ಗದ ಜನರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ತಮ್ಮ-ತಮ್ಮ ಕುಲ ವೃತ್ತಿಗಳನ್ನು ಆಧುನಿಕತೆಗೆ ಒಗ್ಗಿಕೊಳ್ಳುವಂತೆ ಮಾಡಲು ಹಾಗೂ ಈ ಸಮುದಾಯಗಳ ಸಬಲೀಕರಣ ಹೊಂದಬೇಕೆಂಬ ಉದ್ದೇಶದಿಂದ ರಾಜ್ಯದಲ್ಲಿ 1956ರ ಕಂಪನಿ ಕಾಯ್ದೆ ಅನ್ವಯ 28/10/1977ರಂದು ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವಾಲಯದ ಅಡಿಯಲ್ಲಿ **'ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ'** ಎಂಬ ಸಂಸ್ಥೆಯನ್ನು ತೆರೆಯಲಾಗಿತು. ನಂತರದ ದಿನಗಳಲ್ಲಿ ಅಂದರೆ ಮೇ 28, 2004ರಿಂದ ಜನವರಿ 28, 2006ರವರೆಗೆ ರಾಜ್ಯದ

ಮುಖ್ಯಮಂತ್ರಿಗಳಾಗಿದ್ದ 'ಧರ್ಮಸಿಂಗ್'ರವರ ಅಧಿಕಾರವಧಿಯಲ್ಲಿ ಈ ನಿಗಮಕ್ಕೆ ಸರ್ಕಾರಿ ಆದೇಶ ಸಂಖ್ಯೆ: ಸಕಇ 349 ಬಿ.ಎಂ.ಎಸ್. 2005, ದಿನಾಂಕ: 28/10/2005ರಲ್ಲಿ ಹಿಂದುಳಿದ ವರ್ಗಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸಿದ ಧೀಮಂತ ನಾಯಕ ದಿವಂಗತ ಶ್ರೀ. ಡಿ. ದೇವರಾಜ ಅರಸು ಅವರ ಸಂಸ್ಮರಣೆಗಾಗಿ ನಿಗಮದ ಹೆಸರನ್ನು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಎಂದು ಮರು ನಾಮಕರಣ ಮಾಡಲಾಯಿತು.

**ಉಪಸಂಹಾರ**

ಒಟ್ಟಾರೆಯಾಗಿ ಹಲವಾರು ದಶಕಗಳಿಂದ ಶೋಷಣೆ, ದೌರ್ಜನ್ಯಗಳು, ಅನ್ಯಾಯಕ್ಕೆ ಒಳಗಾದ ಜನತೆ ಸಮಾಜದ ಇತರೆ ವರ್ಗಗಳಂತೆ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಾನಮಾನವನ್ನು ಇತರೆ ವರ್ಗಗಳಿಗೂ ಕಲ್ಪಿಸುವಂತೆ ಮಾಡಿದ ಅಥವಾ ಹೋರಾಟ ಮಾಡಿದ ಚಳುವಳಿ ಎಂದರೆ ಈ ಹಿಂದುಳಿದ ವರ್ಗಗಳ ಚಳುವಳಿಗಳು. ಹಿಂದುಳಿದ ವರ್ಗಗಳ ಚಳುವಳಿಯು ವಿಕಾಸದ ನೆಲೆಯಾದ ಹಳೆಯ ಮೈಸೂರು ರಾಜ್ಯವು ಈ ಚಳುವಳಿಗೆ ಬಹಳ ಮಹತ್ವಪೂರ್ಣವಾದ ಅರ್ಥವನ್ನು ತಂದುಕೊಡುವಲ್ಲಿ 1918ರಲ್ಲಿ ಅಸ್ತಿತ್ವಕ್ಕೆ ಬಂದ 'ಜಸ್ಟೀಸ್ ಲಿಸ್ಲೇ ಮಿಲ್ಲರ್ ಕಮಿಟಿ'ಯನ್ನು ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗುತ್ತದೆ. ಶತಮಾನಗಳಿಂದ ಮೇಲ್ಜಾತಿಯವರ ಶೋಷಣೆಗೆ ಒಳಗಾದ ಜನತೆಗೆ ರಾಜಕೀಯ, ಆರ್ಥಿಕ, ಶೈಕಣಿಕ ಸ್ಥಾನಮಾನವನ್ನು ಕಲ್ಪಿಸಿಕೊಡುವಲ್ಲಿ ಈ ಕಮಿಟಿಯ ಹಲವಾರು ಶಿಫಾರಸ್ಸುಗಳು ಇಂದಿಗೂ ಕೂಡ ನಿದರ್ಶನವಾಗಿವೆ ಮತ್ತು ಜನತೆಯು ತಮ್ಮ ಹಕ್ಕು ಮತ್ತು ಸ್ವಾತಂತ್ರ್ಯದ ಅರಿವುಂಟಾಗಿ ಇತರೆ ಮೇಲ್ವರ್ಗದ ಜನತೆಯಂತೆ ಹಾಗೂ ಸಮಾನ ಪ್ರಾತಿನಿಧ್ಯತೆ ತಮಗೂ ದೊರಕಬೇಕೆಂಬ ಜ್ಞಾನದ ಬೆಳಕನ್ನು ಅರಿಸಿದ್ದು, ಈ ಚಳುವಳಿ ಹಳೆಯ ಮೈಸೂರು ರಾಜ್ಯದಲ್ಲಿನ ಅಂದಿನ ಅಸಮಾನತೆ ಮತ್ತು ಶೋಷಣೆ ಮತ್ತು ಪ್ರಾತಿನಿಧ್ಯತೆಯಿಂದ ಬೇಸತ್ತ ಅವಕಾಶವಂಚಿತ ಜನಸಮೂಹ ಅಥವಾ ಶೋಷಣೆಗೆ ಒಳಗಾದ ಕೆಲವು ಹಿಂದುಳಿದ ವರ್ಗಗಳು ಚಳುವಳಿಯ ರೂಪದಲ್ಲಿ ತಮ್ಮ ಬೇಡಿಕೆಗಳನ್ನು ಮತ್ತು ಕೆಲವು ಶಿಫಾರಸುಗಳನ್ನು ಮುಂದಿಟ್ಟು ಸಮಾನವಾದ ರಾಜಕೀಯ, ಸಾಮಾಜಿಕ, ಆರ್ಥಿಕ ಪ್ರಾತಿನಿಧ್ಯತೆಯನ್ನು ಪಡೆಯಲು ಸಾಧ್ಯವಾಯಿತು.

**ಪರಾಮರ್ಶನ ಗ್ರಂಥಗಳು**


- ಅಂಬೇಡ್ಕರ್. ಬಿ. ಆರ್. (ಮೂ.) (1973) .ಕುಮಾರ ವೆಂಕಣ್ಣ (ಅನು.). ಅಸ್ಪೃಶ್ಯರು. ವಸಂತ ಪ್ರಕಾಶನ, ಬೆಂಗಳೂರು.
- ಶಂಕರರಾವ್. (2009). ಭಾರತದ ಸಾಮಾಜಿಕ ಸಮಸ್ಯೆಗಳ ಸಮಗ್ರ ನೋಟ. ಜೈಭಾರತ್ ಪ್ರಕಾಶನ, ಮಂಗಳೂರು.
- ಹಣಮಂತರಾಯ ದೊಡ್ಡಮನಿ. (2011). ದೇವರಾಜ ಅರಸು ಮತ್ತು ಕರ್ನಾಟಕದ ರಾಜಕಾರಣ. ಗೀತಾಂಜಲಿ ಪ್ರಕಾಶನ, ಶಿವಮೊಗ್ಗ.
- Andre Beteille (1992). The Backward Classes in contemporary India. Oxford University Press, New Delhi, Pp 124.

- Kuppuswamy, B. (1978). Backward Class movement in Karnataka. Bangalore University, Bangalore, Karnataka, P. 25-56.
- Rajini Kotari (1978). Caste in Indian Politics. Popular Prakashana, New Delhi, Pp 86- 116.
- Rao, M.S.A. (1979). Social Movements and Social Transformation A study of Two Backward Classes Movement. Manohar Publication, New Delhi, Pp. 44-59
- Rudalph & Rudalph (1967). The modernity of Tradition. Orient Longman, New Delhi.
- Sharma, R.K. (2012). Indian Politics after Independence. Swasthik Publications, New Delhi, P. 17-26.
- Srinivas M N. (1964). Caste in Modern India. Asia Publishing House, Bombay.